

ಅಂದುಕೊಂಡಿದ್ದೆ. ಜೀವನವನ್ನು ನಾಟಕದ ಪಾತ್ರದಂತೆ ನಿಭಾಯಿಸುವ ಉಮೇದನ್ನು ರಂಗಭೂಮಿ ಕಲಿಸಿ ಕೊಡುತ್ತದೆ. ಧೈರ್ಯದಿಂದ ಮುಂದಡಿ ಇಡಲು ದಾರಿ ತೋರುತ್ತದೆ. ಒಳಗಿನ ಕಷ್ಟವೋ ಹೊರಗಿನ ಕಷ್ಟವೋ, ಅನಾರೋಗ್ಯವೋ ಆರ್ಥಿಕ ಸಂಕಷ್ಟವೋ ಬಂದ ಬೇಗೆಗಳಿಗೆಲ್ಲ ಪರಿಹರಿಸಿಕೊಳ್ಳುವಂತಹ ಮನೋಭಾತಿಯನ್ನು ನಾನು ಇಲ್ಲಿಂದಲೇ ಕಲಿತದ್ದು. ಹೀಗಾಗಿ ಈ ಮುಪ್ಪಿನ ವಯಸ್ಸಿನಲ್ಲಿಯೂ ನಾನು ಪಾತ್ರ ಮಾಡುವೆ. ಮಕ್ಕಳಿಗೆ ಹೇಳಿ ಕೊಡುವೆ. ರಂಗ ತರಬೇತಿಗಳಿಗೆ ಹೋಗಿ ಬರುವೆ. ನಾನಿನ್ನೂ ಯಾರ ಮೇಲೆಯೂ ಅವಲಂಬಿತಳಾಗಿಲ್ಲ. ನಾಟಕದಲ್ಲಿಯೂ ಅಷ್ಟೇ, ಅವರವರ ಪಾತ್ರ ಅವರವರೇ ನಿರ್ವಹಿಸಬೇಕು. ಜೀವನವೂ ಒಂದು ನಾಟಕ. ಪಾಲಿಗೆ ಬಂದ ಪಾತ್ರಗಳನ್ನು ನಿರಾಯಾಸವಾಗಿ ನಿರ್ವಹಿಸುವ ಜಾಣ್ಮೆ ಬಂದದ್ದು ರಂಗಭೂಮಿಯ ಕೊಡುಗೆ. ಇನ್ನೊಮ್ಮೆ ಕುರುಕ್ಷೇತ್ರ ನಾಟಕವಾಡುತ್ತಿದ್ದೆವು. ನನ್ನೊಂದಿಗೆ ಭೀಮನ ಪಾತ್ರಧಾರಿ ಕೃಷ್ಣ ಕೃಷ್ಣ ಎಂದು ಹಲಬುತ್ತಲೇ ಬಿದ್ದ . ಪರಾಕಾಷ್ಠೆ ತಲುಪಿದ ಅವನ ಅಭಿನಯ ಕಂಡು ನಾನೂ ಬೆರಗಾದೆ. ಬಿದ್ದವ ಏಳದೇ ಹೋದಾಗ ಎಬ್ಬಿಸಲು ಹೋದವರಿಗೆ ಶಾಕ್. ಕಲಾವಿದ ಪಾತ್ರ ಮಾಡುತ್ತಲೇ ಮರಣವಪ್ಪಿದ್ದ. ಗಳಿಗೆ ಹಿಂದೆ ನನ್ನೊಂದಿಗೆ ಪಾತ್ರ ಮಾಡುತ್ತಿದ್ದವ ಇಲ್ಲ. ಅವನಿಲ್ಲ–